**ಸಾಕ್ಷಿಗೆ ದಿನಾಂಕ: 02.11.2023 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ SAB ರವರಿಂದ**

ನಾನು ಕಿತ್ತೂರಿನಲ್ಲಿ ಹೋಟೆಲ ವ್ಯಾಪಾರ ನಡೆಸುತ್ತೇನೆ. ನಾನು ಕಿತ್ತೂರಿನಲ್ಲಿಯೇ ವಾಸವಾಗಿರುತ್ತೇನೆ. ನಾನು ವಾಸವಿರುವ ಮನೆ ನಂ. 1060/ಬಿ. ಸದರಿ ಮನೆ ನಂ.1060/ಬಿ ನ್ನು 2009 ರಲ್ಲಿ ದೈವಜ್ಞ ಎಂಬುವವರಿಂದ ಖರೀದಿ ತೆಗೆದುಕೊಂಡಿರುತ್ತೇವೆ. ಸದರಿ ಮನೆ ನಂ. 1060/ಬಿ ಹಾಗೂ ವಾದಿಯವರ ಆಸ್ತಿಯು ದೈವಜ್ಞ ಮನೆತನದವರ ಆಸ್ತಿ ಎಂದರೆ ಸಾಕ್ಷಿಯು ಇರಬಹುದು ಆದರೆ ನಾನು ದೈವಜ್ಞ ಇವರಿಂದ ಖರೀದಿ ಪಡೆದಿರುತ್ತೇನೆ. ಮನೆ ನಂ. 1060/ಬಿ ಇದರ ವಿಸ್ತೀರ್ಣ ಪೂರ್ವ ಪಶ್ಚಿಮ 121 ಪೂಟ್ ಹಾಗೂ ಉತ್ತರ ದಕ್ಷಿಣ 23 ಪೂಟ್ ಇರುತ್ತದೆ. ಸದರಿ ಮನೆ ನಂ. 1060/ಬಿ ಇದರ ಪೂರ್ವಕ್ಕೆ ತಿಪ್ಪೆ ಜಾಗ (ಕಸದ ಗುಂಡಿ), ಪಶ್ಚಿಮಕ್ಕೆ ಸರ್ಕಾರ ರಸ್ತೆ, ಉತ್ತರಕ್ಕೆ ರಾಘವೇಂದ್ರ ಶಿರಹಟ್ಟಿಯವರ ಮನೆ ಹಾಗೂ ದಕ್ಷಿಣಕ್ಕೆ ವಾದಿಯ ಆಸ್ತಿ ಇರುತ್ತದೆ. ನಾನು ಸದರಿ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಸದರಿ ಜಾಗದಲ್ಲಿ ಒಂದು ಹಳೆ ಮನೆ ಇತ್ತು ಎಂದರೆ ನಿಜ. ಹಳೆ ಮನೆಯಲ್ಲಿ ವಾದಿ ಮತ್ತು ಪ್ರತಿವಾದಿಯ ಮನೆಯ ದಕ್ಷಿಣ ದಿಕ್ಕಿಗೆ ಸಾಮೂಹಿಕ ಗೋಡೆ ಇತ್ತು ಎಂದರೆ ನಿಜ. ಹಳೆಯ ಮನೆಯನ್ನು 2011-12 ರಲ್ಲಿ ಹೊಸ

ಮನೆಯ ಕಟ್ಟಡವನ್ನು ನಿರ್ಮಾಣ ಮಾಡುಲು ಪ್ರಾರಂಭಸಿರುತ್ತೇವೆ. ಸದರಿ ಮನೆಯನ್ನು ಕಟ್ಟಲು ಪಂಚಾಯತಿಯ ಅನುಮತಿಯನ್ನು ಪಡೆದುಕೊಂಡಿರುತ್ತೇವೆ. ಹೊಸ ಮನೆ ಕಟ್ಟಲು ಸೇಟ್ ಬ್ಯಾಕ್ ಬಿಟ್ಟು ಕಟ್ಟುತ್ತಿದ್ದೀರಾ ಎಂದರೆ ಸಾಕ್ಷಿಯು ಸಾಮೂಹಿಕ ಗೋಡೆಯನ್ನು ಬಿಟ್ಟು ಕಟ್ಟಿರುತ್ತೇವೆ ಎಂದು ಹೇಳುತ್ತಾರೆ. ಹೊಸ ಮನೆಯನ್ನು ನಾಲ್ಕು ದಿಕ್ಕಿಗೂ ಸೇಟ್ ಬ್ಯಾಕ್ ಬಿಟ್ಟು ಮನೆಯನ್ನು ಕಟ್ಟಿರುತ್ತೇವೆ. ನಮ್ಮ ಹೊಸ ಮನೆಯ ಕಟ್ಟಡ 2013 ರಲ್ಲಿ ಮುಕ್ತಾಯವಾಗಿರುತ್ತದೆ. ನಮ್ಮ ಮನೆ ಹೊಸ ಮನೆ ಕಟ್ಟಡ ಮುಕ್ತಾಯವಾದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

ದಾವೆಯ ಬಗ್ಗೆ ನಮ್ಮ ವಕೀಲರ ಮುಖಾಂತರ ತಿಳಿದುಕೊಂಡಿರುತ್ತೇನೆ. ಪ್ರತಿವಾದ ಪತ್ರಕ್ಕೆ ನಾನೇ ಮಾಹಿಯನ್ನು ನೀಡಿರುತ್ತೇನೆ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಹೀಗೆ ನೀಡಿದ ದಾಖಲೆಗಳಲ್ಲಿ ಮನೆ ಮುಕ್ತಾಯವಾದ ಬಗ್ಗೆ ಪ್ರಮಾಣ ಪತ್ರ ತೋರಿಸಿರುತ್ತೇನೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ಪಂಚಾಯತಿಯವರು ಮನೆ ಕಟ್ಟುವ ಸಮಯದಲ್ಲಿ ನೀಡಿದ ಅನುಮತಿ ಪತ್ರದಲ್ಲಿ ಮನೆ ಕಟ್ಟಡ ಮುಕ್ತಾಯವಾದ ನಂತರ ಪಂಚಾಯತಿಯಿಂದ ಕಟ್ಟಡ ಮುಕ್ತಾಯವಾದ ಬಗ್ಗೆ ಪ್ರಮಾಣ ಪತ್ರ ಪಡೆದುಕೊಳ್ಳಬೇಕೆಂಬ ಷರತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು

ಪಂಚಾಯತಿಯವರು ಅನುಮತಿ ನೀಡಿದಂತೆ ಮನೆಯನ್ನು ಕಟ್ಟದೇ ಇರುವುದರಿಂದ ನಾವು ಪಂಚಾಯತಿಯಿಂದ ಕಟ್ಟಡ ಮುಕ್ತಾಯವಾದ ಬಗ್ಗೆ ಪ್ರಮಾಣ ಪತ್ರ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಕಟ್ಟಡ ಮುಕ್ತಾಯವಾದ ಬಗ್ಗೆ ಪ್ರಮಾಣ ಪತ್ರ ಪಡೆದುಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಎಂದು ಹೇಳುತ್ತಾರೆ. ಈಗ ಕಟ್ಟಡ ಮುಕ್ತಾಯವಾದ ಬಗ್ಗೆ ಪ್ರಮಾಣ ಪತ್ರವನ್ನು ಈಗ ನ್ಯಾಯಾಲಯಕ್ಕೆ ಹಾಜರುಪಡಿಸಲು ಏನು ತೊಂದರೆ ಇದೆ ಎಂದರೆ ಸಾಕ್ಷಿಯು ಸದರಿ ಪ್ರಮಾಣ ಪತ್ರವನ್ನು ಕೇಳಿ ಪಡೆದುಕೊಂಡು ಬಂದು ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ.

ವಾದಿಯ ಮನೆ ನಂ. 1060/ಎ. ವಾದಿಯವರ ಮನೆ ವಿಸ್ತೀರ್ಣ ಹಾಗೂ ನಮ್ಮ ಮನೆಯ ವಿಸ್ತೀರ್ಣ ಎರಡು ಸಮ ಇರುತ್ತವೆ ಎಂದರೆ ಸರಿಯಲ್ಲ. ವಾದಿ ಮನೆಯ ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. 2009 ಪೂರ್ವದಲ್ಲಿಯೇ ವಾದಿಯರು ತಮ್ಮ ಮನೆಯಲ್ಲಿ ವಾಸವಿದ್ದರು ಎಂದರೆ ನಿಜ. ವಾದಿಯರು ತಮಗೆ ಸಂಬಂಧಿಸಿದ ಆಸ್ತಿಯಲ್ಲಿ ಕಬ್ಜಾದಲ್ಲಿದ್ದರು ಎಂದರೆ ನಿಜ. ನಾನು ಮನೆ ನಂ. 1060/ಬಿ ನ್ನು ಖರೀದಿ ಮಾಡಿಕೊಳ್ಳುವ ಸಮಯದಲ್ಲಿ ವಾದಿಯರನ್ನು ಆಸ್ತಿಯ ವಿಸ್ತೀರ್ಣದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಖರೀದಿ ಮಾಡಿಕೊಳ್ಳುವ ಸಮಯದಲ್ಲಿ ನಮಗೆ ಖರೀದಿ ಕೊಡುವವರೆ ಅಳತೆ ಮಾಡಿ ನಮಗೆ ಖರೀದಿ

ಕೊಟ್ಟಿರುತ್ತಾರೆ. ನಾವು ತೆಗೆದುಕೊಂಡ ಆಸ್ತಿಯಲ್ಲಿರುವ ಹಳೆ ಮನೆಯನ್ನು ಕೆಡುವಾಗ ಅಥವಾ ಮನೆಯನ್ನು ಕಟ್ಟುವ ಸಮಯದಲ್ಲಿ ಆಸ್ತಿಯನ್ನು ಅಳತೆ ಮಾಡಲಾಗಿದೆಯೇ ಎಂದರೆ ಸಾಕ್ಷಿಯು ಮನೆಯನ್ನು ಕಟ್ಟುವಾ ಜಾಗವನ್ನು ಮಾತ್ರ ಅಳತೆ ಮಾಡಿರುತ್ತೇನೆ ಎಲ್ಲಾ ಜಾಗವನ್ನು ಅಳತೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಆಸ್ತಿಯನ್ನು ಹೊಸ ಮನೆಯನ್ನು ಕಟ್ಟುವಾಗ ವಾದಿಯರಿಂದ ಯಾವುದೇ ತಕರಾರು ಇಲ್ಲ ಎಂದು ಯಾವುದೇ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ.

ನಾನು ಪಂಚಾಯತಿ ನೀಡಿದ ಅನುಮತಿಯಂತೆ ಕಟ್ಟಡ ನಿರ್ಮಾಣ ಮಾಡದೇ ಇರುವುದರಿಂದ ಹಾಗೂ ವಾದಿಯ ಆಸ್ತಿಯನ್ನು ಅತೀಕ್ರಮಣ ಮಾಡಿ ಕಟ್ಟಡ ಕಟ್ಟಿರುವುದರಿಂದ ಪಂಚಾಯತಿಯಿಂದ ಕಟ್ಟಡ ಮುಕ್ತಾಯವಾದ ಬಗ್ಗೆ ಪ್ರಮಾಣ ಪತ್ರವನ್ನು ಪಡದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಅತೀಕ್ರಮಣ ಮಾಡಿ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

( ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**